

ತುಡಿತ (mayl), ಆಶೆ (iradat), ಅನುರಾಗ (mohabbat) ಮತ್ತು ಪ್ರೀತಿ (ishq) ಎನ್ನುವ ಆ ಘಟ್ಟಗಳನ್ನು ಇರಾನ್ ಕಡೆಯ ಸೂಫಿ ಆಜೀಝ್ ನಸಾಫಿ (Aziz Nasafi) ತನ್ನ ಪುಸ್ತಕ 'Risala Fil Ishq' ಎನ್ನುವುದರಲ್ಲಿ ಹೇಳಿದ್ದಾನೆ.

ಈ ಮೇಲಿನವು ಸಾಂಸ್ಕೃತಿಕ ಭಿನ್ನತೆಗಳಾದರೆ ಧಾರ್ಮಿಕವಾಗಿಯೂ ಪ್ರಪಂಚದಲ್ಲಿ ರಮ್ಯ ಪ್ರೀತಿಯ ಬಗ್ಗೆ ಭಿನ್ನ ದೃಷ್ಟಿಕೋನಗಳು ಉಪಸ್ಥಿತಿಯಲ್ಲಿವೆ. ಮನುಷ್ಯಪ್ರೀತಿಗೆ ಎಲ್ಲ ಧರ್ಮಗಳೂ ಕರೆಕೊಡುತ್ತವಾದರೂ ರಮ್ಯ ಪ್ರೀತಿಯ ಬಗ್ಗೆ ಮಡಿವಂತಿಕೆಯೂ ಇಲ್ಲದಿಲ್ಲ. ಯಹೂದಿ ಧರ್ಮದ ಹಿಬ್ರುದಲ್ಲಿ 'ಅಹಾವ' ಅನ್ನುವ ಪದದ ಬಳಕೆಯಿದ್ದು, ರಮ್ಯ ಪ್ರೀತಿಯ ಜೊತೆಗೆ ಎಲ್ಲ ಬಗೆಯ ಮನುಷ್ಯಪ್ರೀತಿಗಳನ್ನು ಅದು ಗುರುತಿಸುತ್ತದೆ. ದೇವರು ಮತ್ತು ಮನುಷ್ಯರ ನಡುವಿನ ಪ್ರೀತಿಯ ಕಲ್ಪನೆಯೂ ಅದರಲ್ಲಿ ಇದೆ; ಪ್ರೀತಿಯ ಬಗ್ಗೆ ವಿರೋಧವಿಲ್ಲ.

ಕ್ರೈಸ್ತರಲ್ಲಿ ಪ್ರೀತಿಯೆನ್ನುವುದು ಬರುವುದೇ ದೇವರಿಂದ. ಆಗಸ್ಟಿನ್ ಎನ್ನುವ ಸಂತ ಪ್ರೀತಿ ಮತ್ತು ಕಾಮದ ನಡುವಿನ ವ್ಯತ್ಯಾಸದ ಬಗ್ಗೆ ಮಾತಾಡುತ್ತಾನೆ. ಸಂತ ಥಾಮಸ್ ಅಕ್ವಿನಾಸ್ ಎಂಬುವವನು, 'ಬೇರೆಯವರಿಗೆ ಒಳಿತನ್ನು ಮಾಡುವುದೆಲ್ಲ ಪ್ರೀತಿ'ಯೆನ್ನುತ್ತಾನೆ. ರಮ್ಯಪ್ರೀತಿಯಲ್ಲೂ ನಂಬಿಕೆಯಿಡುತ್ತಾನೆ.

ಮುಸ್ಲಿಂಮರು ಕೂಡ ತಮ್ಮದೇ ನಂಬಿಕೆಯ ಎಲ್ಲರಲ್ಲೂ ಭ್ರಾತೃತ್ವ ಭಾವದ ಪ್ರೀತಿಯನ್ನು ಹೇಳುತ್ತಾರೆ. ಸೂಫಿ ಪಂಥದ 'ಇಷ್ಕ್'ನಲ್ಲಿ ನಂಬಿಕೆಯಿಡುತ್ತಾರೆ.

ಬೌದ್ಧ ಧರ್ಮ ಮತ್ತು ಹಿಂದೂ ಧಾರ್ಮಿಕ ನಂಬಿಕೆಗಳಲ್ಲಿ ಕರ್ಮ, ಕಾಮ ಮತ್ತು ಪ್ರೇಮಗಳನ್ನು ಮುಕ್ತವಾಗಿ ವರ್ಣಿಸಲಾಗಿದೆ. ವೈಯಕ್ತಿಕವಾದ, ದೈಹಿಕವಾದ ಪ್ರೀತಿಗೆ ಕಾಮದೇವನೆಂಬ ದೇವತೆಯ ಕಲ್ಪನೆಯನ್ನು ನೀಡಲಾಗಿದೆ. ರಮ್ಯತೆ, ಶೃಂಗಾರವನ್ನೇ ಒಸರುವ ಕಾಮದೇವ ಮತ್ತು ರತಿಯ ಶಿಲ್ಪಗಳನ್ನು ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ನೋಡಬಹುದಾಗಿದೆ.

ಕಾಮ ಮತ್ತು ಪ್ರೇಮದ ಜೊತೆಗೆ ಕರುಣೆ ಮತ್ತು ಭಕ್ತಿರಸಗಳ ಬಗ್ಗೆ ಕೂಡ ಹಿಂದೂ ಧರ್ಮದಲ್ಲಿ ಹೇಳಲಾಗಿದೆ. ಇಲ್ಲಿ ಪ್ರೀತಿಯನ್ನು ಭಕ್ತಿಯ ರೂಪದಲ್ಲಿ ಕೂಡ ನೋಡಿರುವುದು ವಿಶೇಷ. ತುಳಸೀದಾಸರ 'ಭಾಗವತ ಪುರಾಣ' ಮತ್ತು ನಾರದ ಮುನಿ ಬರೆದರು ಎಂದು ನಂಬಲಾಗಿರುವ 'ನಾರದ ಭಕ್ತಿ ಸೂತ್ರ'ಗಳಲ್ಲಿ ಒಂಬತ್ತು ಬಗೆಯ ಭಕ್ತಿಗಳ ಬಗ್ಗೆ ವಿವರಗಳಿವೆ. ಇನ್ನೂ ವಿಶೇಷವೆಂದರೆ ರಮ್ಯಪ್ರೀತಿಯನ್ನು ಅದರೊಡನಿರುವ ಕಾಮವನ್ನು ಬದುಕಿನ ಮುನ್ನೆಡೆಗೆ ಬೇಕಾದ ಸೂತ್ರ ಎಂದು ಅವರು ಕರೆದಿರುವುದು.

## ಎಲ್ಲದರ ಉಲ್ಲಂಘನೆಯ ಶಕ್ತಿ

ಇಂದಿನ ರಾಜಕೀಯ ದೃಷ್ಟಿಯಲ್ಲಿ ಮುಕ್ತ ಪ್ರೇಮ ಎಂದರೆ ಅದು ವೈವಾಹಿಕ ವ್ಯವಸ್ಥೆಯ ಅಂಗೀಕಾರವನ್ನು ಪಡೆದಿರಬೇಕಾಗಿದೆ. ಇಲ್ಲವಾದಲ್ಲಿ ರಮ್ಯ ಪ್ರೀತಿ ತನ್ನ ಗಮ್ಯವನ್ನು ತಲುಪುವ ಬದ್ಧತೆಯ ಕೋನವನ್ನು ಕಳೆದುಕೊಳ್ಳುತ್ತದೆ. ಆದರೆ ಬರಿಯ ಸೈದ್ಧಾಂತಿಕ ದೃಷ್ಟಿಯಿಂದ ಮಾನಸಿಕವಾದ ಬದ್ಧತೆಯನ್ನು ವಿವಾಹವಿಲ್ಲದೆಯೂ ನಿರೀಕ್ಷಿಸಬಹುದಾಗಿದೆ. ಆದರೆ ಮಿಕ್ಕಂತೆ ಅದು ನಿಜದಲ್ಲಿ ಸಾಧ್ಯವಾಗುವುದಿಲ್ಲ ಅಥವಾ ದುಸ್ಸಾಧ್ಯ. ಸಾಮಾಜಿಕ ವ್ಯವಸ್ಥೆಗಳು ಪ್ರೀತಿಯ ಗಮ್ಯಕ್ಕೆ ಮದುವೆಯನ್ನೇ ಮುಂದೆ ಮಾಡಿವೆಯಾದರೂ ಕೆಲವರ ರಮ್ಯ ಪ್ರೀತಿಗಳು ಅದನ್ನು ಮೀರಿ ನಿಲ್ಲುತ್ತವೆ.

ಪ್ರೀತಿಯನ್ನು ಹೀಗೇ ಮಾಡಬೇಕೆಂಬ ನಿಯಮವಿಲ್ಲ. ಪ್ರೀತಿಸುವವರಿಗೆ ಹಾನಿ ಮಾಡದಂತೆ ಮತ್ತು ಅವರ ಒಳಿತಿಗೆ ಹಂಬಲಿಸುತ್ತ ತೆಗೆದುಕೊಳ್ಳುವ ಎಲ್ಲ ಬಗೆಯ ನಿರ್ಧಾರ, ಚಟುವಟಿಕೆಗಳ ಮೂಲಕವೇ ಪ್ರೀತಿಸಬಹುದು.

ರಮ್ಯ ಪ್ರೀತಿಗೊಂದು ನಿಗದಿತ ದಾರಿ ಎಂದೂ ಇಲ್ಲದಿದ್ದರೂ ಅದು ಕಾಲದ ಮಂಥನದಲ್ಲಿ ತೇಲುವುದನ್ನು ಕಾಣುತ್ತೇವೆ. ಅದನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ಪ್ರಪಂಚದ ಹಲವು ಸಂಸ್ಕೃತಿಗಳಲ್ಲಿ ಭಿನ್ನತೆ ಇದ್ದಾಗ್ಯೂ ಅದು ತನ್ನದೇ ಹಾದಿಯನ್ನು ಸೃಷ್ಟಿಸಿಕೊಂಡು ಎಲ್ಲೆಡೆ ಅಸ್ತಿತ್ವದಲ್ಲಿ ಇರುವುದನ್ನು ಕಾಣುತ್ತೇವೆ. ಕಾಲಕ್ಕೆ ತಕ್ಕಂತೆ ಹೊಸ ಹೆಸರು, ಹೊಸ ಪೋಷಾಕು ತೊಟ್ಟು ಮನುಷ್ಯರ ನಡುವೆ ಮನೆಮಾಡಿಕೊಂಡಿರುವುದನ್ನು ನೋಡುತ್ತೇವೆ. ಹಾಗಾಗಿ ಪ್ರತಿಯೊಬ್ಬರೂ ಇನ್ನೊಬ್ಬರನ್ನು ಪ್ರೀತಿಸುವ ಎಲ್ಲ ಬಗೆಗಳೂ ಪ್ರೀತಿಗಳೇ.

ಪ್ರೀತಿ ಮತ್ತು ಮನುಷ್ಯ ಬೇರೆ ಬೇರೆಯಲ್ಲ. ಪ್ರೀತಿ ಇಲ್ಲದೆ ಹೋದರೂ ಮನುಷ್ಯತ್ವವೂ ಕರಗಿಹೋಗುತ್ತದೆ. ಪ್ರೇಮದ ಒಂದು ಬೃಹತ್ ಟೊಂಗೆ 'ರಮ್ಯ ಪ್ರೀತಿ'. ಇದೇ ಕಾರಣಕ್ಕೆ ಅದು ಶಾಶ್ವತವಾದದ್ದು. ಅದು ಮನುಷ್ಯ ಬದುಕುಳಿಯಲು, ಬದುಕಿನಲ್ಲಿ ಬದ್ಧತೆ, ಜವಾಬ್ದಾರಿ ಮತ್ತು ಆಸಕ್ತಿಯಿಂದ ಬದುಕಲು ಬೇಕಿರುವ ಮೂಲ ದ್ರವ್ಯ. ಇಂದಿನ ತಂತ್ರಜ್ಞಾನ ಅದಕ್ಕೆ ಮಾರಕವಲ್ಲದಿದ್ದರೂ ಮನುಷ್ಯನ ಎಂದಿನ ಅಜ್ಞಾನ ಮತ್ತು ಧಾರ್ಮಿಕ ಸಂಕುಚಿತ ಮನೋಭಾವಗಳು ಅಡ್ಡಗೋಡೆಗಳಾಗಬಲ್ಲವು. ಆದರೆ ಎಲ್ಲ ಕಾಲದಂತೆ ಇಂದಿಗೂ ರಮ್ಯ ಪ್ರೀತಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾದ ಕರ್ತವ್ಯ ಮನುಷ್ಯ, ಸಮಾಜ ಮತ್ತು ಸರ್ಕಾರಗಳ ಮೇಲಿದೆ.

ಒಲವಿನ ಪೂಜೆಗೆ ಒಲವೆ ಮಂದಾರ
ಒಲವೆ ಬದುಕಿನ ಬಂಗಾರ
ಒಲವಿನ ನೆನಪೆ ಹದಯಕೆ ಮಧುರ
ಒಲವೆ ದೈವದ ಸಾಕ್ಷಾತ್ಕಾರ
ಒಲವೆ ಜೀವನ ಸಾಕ್ಷಾತ್ಕಾರ
ಒಲವೆ ಮರೆಯದ ಮಮಕಾರ

-ಕಣಗಾಲ್ ಪ್ರಭಾಕರಶಾಸ್ತ್ರಿ

ಪ್ರತಿಕ್ರಿಯಿಸಿ: feedback@sudha.co.in